## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ದಿವಂಗತ ಬಸವರಾಜ ಅಂಗಡಿ, ಹಿಂದಿನ ಕಾರ್ಯದರ್ಶಿ, ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರಿಂದ ದುರುಪಯೋಗವಾಗಿರುವ ಮೊತ್ತವನ್ನು ವಸೂಲು ಮಾಡುವಲ್ಲಿ ಕರ್ತವ್ಯಲೋಪ ಎಸಗಿರುವ ಅಧಿಕಾರಿಗಳ ವಿರುದ್ಧದ ಶಿಸ್ತುಕ್ರಮ- ಅಂತಿಮ ಆದೇಶ.

ಓದಲಾಗಿದೆ:- 1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಇವರ ಪತ್ರ ಸಂಖ್ಯೆ:ಜಿಪಂಬ/ಸಿಬ್ಬಂಧಿ-04/ಸಿಸಿಎ/25/2014-15 ದಿ 24.07.2014.

2) ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 67 ವಿಸೇಬಿ 2015 ದಿ 06.04.2015

3) ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಗಳು.

--------

ಪ್ರಸ್ತಾವನೆ:-

ದಿವಂಗತ ಬಸವರಾಜ ಅಂಗಡಿ, ಇವರು ಈ ಹಿಂದೆ ಕಾರ್ಯದರ್ಶಿಯಾಗಿ ಪಾಪಿನಾಯಕನಹಳ್ಳಿ, ಗ್ರಾಮ ಪಂಚಾಯತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಹಣದುರುಪಯೋಗವಾಗಿರುವ ರೂ.2,33,633/-ಗಳನ್ನು ವಸೂಲಿ ಮಾಡಲು ಕ್ರಮಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಇವರಿಂದ ದಿನಾಂಕ 19.12.2002ರಂದು ಆದೇಶಿಸಲಾಗಿದೆ. ಆದರೆ ಹೂವಿನಹಡಗಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ವಸೂಲಿ ಮಾಡಬೇಕಾದ ಹಣವನ್ನು ವಸೂಲಿ ಮಾಡದೇ, ನಿಧನ ಹೊಂದಿದ ಶ್ರೀ ಬಸವರಾಜ ಅಂಗಡಿ ಇವರ ಕುಟುಂಬಕ್ಕೆ ವಿಶ್ರಾಂತಿ ವೇತನವನ್ನು ಮಂಜೂರು ಮಾಡಿರುವ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಜರುಗಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ-(1)ರ ದಿನಾಂಕ 24.07.2014ರ ಪತ್ರದಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಹೂವಿನಹಡಗಲಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿವಾಹಕ ಅಧಿಕಾರಿಗಳಿಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಗಳು 1957ರ ನಿಯಮ 12(i)(ಎ)ರಡಿಯಲ್ಲಿ ದಿನಾಂಕ 06.04.2015ರಂದು ಕಾರಣ ಕೇಳುವ ನೋಟೀಸ್ ನೊಂದಿಗೆ ದೋಷಾರೋಪಣಾಪಟ್ಟಿಯನ್ನು ಜಾರಿಗೊಳಿಸಲಾಗಿದೆ.

1) ಶ್ರೀ ಬಿ.ಟಿ.ಮೋಹನ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,
2) ಶ್ರೀ ವಿ.ಎನ್.ಪಾಟೀಲ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,
3) ಡಾ: ಲಾಲ್ಯಾ ನಾಯಕ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,
4) ಶ್ರೀ ಐ.ಎಸ್.ಹಿರೇಗೌಡರ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,
5) ಶ್ರೀ ಸಿ.ಟಿ.ಮುದ್ದುಕುಮಾರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,
6) ಶ್ರೀ ಎಂ.ಶಿವಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,
7) ಶ್ರೀ ಬಿ.ಎಸ್.ದೇಸಾಯಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,
8) ಶ್ರೀ ಎಲ್.ಸಿದ್ದೇಶ್ವರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,
9) ಶ್ರೀ ಎಲ್. ಮೇಘನಾಯ್ಕ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,
10) ಶ್ರೀ ದೇವದಾಸ್ ಟಿ., ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,
11) ಶ್ರೀ ಬಿ.ಪಿ. ಹನುಮಂತರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,
12) ಶ್ರೀ ಯೋಗಾನಂದ ಡಿ.ಬಿ. ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,

13) ಶ್ರೀ ಡಿ.ಮಂಜಣ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ,

ಮೇಲೆ ಒದಲಾದ ಕ್ರಮ ಸಂಖ್ಯೆ-(2)ರಲ್ಲಿ ಅಪಾಧಿತರುಗಳು ಸದರಿ ನೋಟೀಸಿಗೆ ಈ ಕೆಳಕಂಡಂತೆ ಲಿಖಿತ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ.

(1) **ಶ್ರೀ ಬಿ.ಟಿ.ಮೋಹನ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,** ಹೂವಿನಹಡಗಲಿ, ಇವರು ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿ ತಾವು ದಿನಾಂಕ 29.5.2002 ರಿಂದ 20.11.2002ರವರೆಗೆ ಸದರಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದ್ದು ಶ್ರೀ ಬಸವರಾಜ ಅಂಗಡಿ ಇವರು ದಿನಾಂಕ 01.10.2000ರಂದು ನಿಧನ ಹೊಂದಿದ್ದು, ಸದರಿಯವರು ನಿಧನ ಹೊಂದಿದ ನಂತರ ಅವರಿಗೆ ಲಭ್ಯವಾಗುವ ಕುಟುಂಬ ವಿಶ್ರಾಂತಿ ವೇತನ ಮತ್ತು ಇತರೆ ಸೌಲಭ್ಯಗಳನ್ನು ಅವರ ವಾರಸುದಾರರಿಗೆ ಮಂಜೂರು ಮಾಡುವ ಮೊದಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ. ಬಳ್ಳಾರಿ ಇವರಿಗೆ ದಿನಾಂಕ 28.6.2001, 19.7.2001 ಮತ್ತು 26.8.2001 ರಂದು ಪತ್ರವನ್ನು ಬರೆದು ಮೃತ ನೌಕರರ ಅವಲಂಬಿತರಿಗೆ ವಿಶ್ರಾಂತಿ ವೇತನ ಮಂಜೂರು ಮಾಡಲು ಅನುಮತಿಯನ್ನು ಕೋರಿದ್ದು, ಅವರಿಂದ ಯಾವುದೇ ಹಿಂಬರಹವು ಬಾರದೇ ಇರುವುದರಿಂದ ಮೃತ ಕುಟುಂಬಕ್ಕೆ ಸಕಾಲದಲ್ಲಿ ಕುಟುಂಬ ವಿಶ್ರಾಂತಿ ವೇತನವನ್ನು ಮಂಜೂರು ಮಾಡದಿದ್ದಲ್ಲಿ ಬಡ್ಡಿಯನ್ನು ಪಾಲಿಸಬೇಕೆಂಬ ನಿಯಮವಿದ್ದು, ಈ ಸಂದರ್ಭಕ್ಕೆ ಗುರಿಯಾಗುವುದನ್ನು ತಪ್ಪಿಸುವ ಹಿನ್ನೆಲೆಯಲ್ಲಿ ಮೃತರ ಕುಟುಂಬಕ್ಕೆ ನಿವೃತ್ತಿ ವೇತನವನ್ನು ಮಂಜೂರು ಮಾಡಲು ಕ್ರಮ ವಹಿಸಿರುಸಿರುವುದಾಗಿ ತಿಳಿಸಿರುತ್ತಾರೆ.

(2) **ಶ್ರೀ ವಿ.ಎನ್.ಪಾಟೀಲ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,** ಹೂವಿನಹಡಗಲಿ, ಇವರು ಈಗಾಗಲೇ ನಿವೃತ್ತರಾಗಿರುತ್ತಾರೆ.

(3) **ಡಾ: ಲಾಲ್ಯ ನಾಯಕ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,** ಇವರು ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿ ತಾವು ದಿನಾಂಕ 19.3.2003 ರಿಂದ 4.4.2004 ರವರೆಗೆ ಕಾರ್ಯ ನಿರ್ವಹಿಸಿದ್ದು, ಶ್ರೀ ಬಸವರಾಜ ಅಂಗಡಿ ಅವರ ಕಾರ್ಯ ಅವಧಿ ಪೂರ್ವದಲ್ಲಿಯೇ ಪಿಂಚಣಿ ಮಂಜೂರಾತಿ ಸೌಲಭ್ಯವು ಮಂಜೂರು ಆಗಿದ್ದು, ಸದರಿ ಪ್ರಸ್ತಾವನೆಗೆ ತಾವು ಶಿಫಾರಸ್ಸು ಮಾಡಿಲ್ಲವೆಂದು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

(4) **ಶ್ರೀ ಐ.ಎಸ್.ಹಿರೇಗೌಡರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,ಹೂವಿನಹಡಗಲಿ** ಇವರು ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿ ತಾವು ದಿನಾಂಕ 5.4.2004 ರಿಂದ 1.8.2004 ರವರೆಗೆ ಕಾರ್ಯನಿರ್ವಹಿಸಿದ್ದು, ತಮ್ಮ ಕಾರ್ಯ ಅವಧಿಯಲ್ಲಿ ಸದರಿ ಘಟನೆಯು ನಡೆದಿರುವುದಿಲ್ಲವೆಂದು ಅವರ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

(5) **ಶ್ರೀ ಸಿ.ಟಿ.ಮುದ್ದುಕುಮಾರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ** ಇವರು ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿ ತಾವು ದಿನಾಂಕ 2.8.2004 ರಿಂದ 5.8.2004ರವರೆಗೆ 4 ದಿನಗಳವರೆಗೆ ಕಾರ್ಯ ನಿರ್ವಹಿಸಿದ್ದು, ಈ ಅವಧಿಯಲ್ಲಿ ಸದರಿ ಘಟನೆಯು ನಡೆದಿರುವುದಿಲ್ಲವೆಂದು ತಿಳಿಸಿರುತ್ತಾರೆ.

(6) **ಶ್ರೀ ಎಂ.ಶಿವಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ** ಇವರು ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿ ತಾವು ದಿನಾಂಕ 6.8.2004 ರಿಂದ 31..5.2008 ರವರೆಗೆ ಕಾರ್ಯನಿರ್ವಹಿಸಿದ್ದು, ಆರೋಪಿತ ನೌಕರರ ಅವಲಂಬಿತರಿಗೆ ಕುಟುಂಬ ವಿಶ್ರಾಂತಿ ವೇತನವನ್ನು ದಿನಾಂಕ 22.12.2001 ರಂದು ಮಹಾಲೇಖಪಾಲರ ಕಛೇರಿಗೆ ಕಳುಹಿಸಿದ್ದು, ಆ ಅವಧಿಯಲ್ಲಿ ತಾವು ಕರ್ತವ್ಯದಲ್ಲಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

(7) **ಶ್ರೀ ಬಿ.ಎಸ್.ದೇಸಾಯಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ** ಇವರು ಸಲ್ಲಿಸಿರುವ ಹೇಳಿಕೆಯಲ್ಲಿ ತಾವು ದಿನಾಂಕ 31.5.2008 ರಿಂದ 9.9.2009 ರವರೆಗೆ ಕಾರ್ಯನಿರ್ವಹಿಸಿದ್ದು, ಆರೋಪಿತ ನೌಕರರ ಅವಲಂಬಿತರಿಗೆ ಕುಟುಂಬ ವಿಶ್ರಾಂತಿ ವೇತನವನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

(8) **ಶ್ರೀ ಎಲ್.ಮೇಘಾನಾಯ್ಕ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ಹೂವಿನಹಡಗಲಿ** ಇವರು ಸಲ್ಲಿಸಿರುವ ಹೇಳಿಕೆಯಲ್ಲಿ ತಾವು ದಿನಾಂಕ 7.7.2011 ರಿಂದ 5.5.2012 ರವರೆಗೆ ಕಾರ್ಯನಿರ್ವಹಿಸಿದ್ದು, ದಿವಂಗತ ಬಸವರಾಜ ಅಂಗಡಿ ಇವರಿಗೆ ತಮ್ಮ ಕಾರ್ಯ ಅವಧಿಯಲ್ಲಿ ಯಾವುದೇ ಸೇವಾ ಸವಲತ್ತುಗಳನ್ನು ಮಂಜೂರು ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

(9) **ಶ್ರೀ ಟಿ.ದೇವದಾಸ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ** ಇವರು ಸಲ್ಲಿಸಿರುವ ಹೇಳಿಕೆಯಲ್ಲಿ ತಾವು ದಿನಾಂಕ 5.5.2012 ರಿಂದ 21..5.2012 ರವರೆಗೆ ಕಾರ್ಯನಿರ್ವಹಿಸಿದ್ದು, ದಿವಂಗತ ಬಸವರಾಜ ಅಂಗಡಿ ಇವರಿಗೆ ತಮ್ಮ ಕಾರ್ಯ ಅವಧಿಯಲ್ಲಿ ಯಾವುದೇ ಸೇವಾ ಸವಲತ್ತುಗಳನ್ನು ಮಂಜೂರು ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ

(10) **ಶ್ರೀ ಬಿ.ಪಿ.ಹನುಮಂತರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಹೂವಿನಹಡಗಲಿ** ಇವರು ಸಲ್ಲಿಸಿರುವ ಹೇಳಿಕೆಯಲ್ಲಿ ತಾವು ದಿನಾಂಕ 15.1.2013 ರಿಂದ 14.2.2013ರವರೆಗೆ ಕಾರ್ಯನಿರ್ವಹಿಸಿದ್ದು, ದಿವಂಗತ ಬಸವರಾಜ ಅಂಗಡಿ ಇವರಿಗೆ ತಮ್ಮ ಕಾರ್ಯ ಅವಧಿಯಲ್ಲಿ ಯಾವುದೇ ಸೇವಾ ಸವಲತ್ತುಗಳನ್ನು ಮಂಜೂರು ಮಾಡಿರುವುದಿಲ್ಲವೆಂದು ಅವರ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

(11) **ಶ್ರೀ ಎಲ್.ಸಿದ್ದೇಶ್ವರ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,** ಇವರು ಸಲ್ಲಿಸಿರುವ ಹೇಳಿಕೆಯಲ್ಲಿ ತಾವು ದಿನಾಂಕ 14.2.2013 31.8.2013 ರವರೆಗೆ ಕಾರ್ಯನಿರ್ವಹಿಸಿದ್ದು, ದಿವಂಗತ ಬಸವರಾಜ ಅಂಗಡಿ ಇವರಿಗೆ ತಮ್ಮ ಕಾರ್ಯ ಅವಧಿಯಲ್ಲಿ ಯಾವುದೇ ಸೇವಾ ಸವಲತ್ತುಗಳನ್ನು ಮಂಜೂರು ಮಾಡಿರುವುದಿಲ್ಲವೆಂದು ಅವರ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

(12) **ಶ್ರೀ ಡಿ.ಬಿ.ಯೋಗಾನಂದ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಇವರು ಸಲ್ಲಿಸಿರುವ ಹೇಳಿಕೆಯಲ್ಲಿ ತಾವು** ದಿನಾಂಕ 10.9.2013 ರಿಂದ 28.9.2013ರವರೆಗೆ ಕಾರ್ಯನಿರ್ವಹಿಸಿದ್ದು, ದಿವಂಗತ ಬಸವರಾಜ ಅಂಗಡಿ ಇವರಿಗೆ ತಮ್ಮ ಕಾರ್ಯ ಅವಧಿಯಲ್ಲಿ ಯಾವುದೇ ಸೇವಾ ಸವಲತ್ತುಗಳನ್ನು ಮಂಜೂರು ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

(13) **ಶ್ರೀ ಡಿ.ಮಂಜಣ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ,** ಇವರು ಸಲ್ಲಿಸಿರುವ ಹೇಳಿಕೆಯಲ್ಲಿ ತಾವು ದಿನಾಂಕ 28.9.2013 ರಿಂದ 8.1.2014 ರವರೆಗೆ ಕಾರ್ಯನಿರ್ವಹಿಸಿದ್ದು, ದಿವಂಗತ ಬಸವರಾಜ ಅಂಗಡಿ ಇವರಿಗೆ ತಮ್ಮ ಕಾರ್ಯ ಅವಧಿಯಲ್ಲಿ ಯಾವುದೇ ಸೇವಾ ಸವಲತ್ತುಗಳನ್ನು ಮಂಜೂರು ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಕ ಜಿಲ್ಲಾ ಪಂಚಾಯತಿ ಬಳ್ಳಾರಿ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ, ಆಪಾದಿತರ ವಿರುದ್ದದ ಆರೋಪಗಳು ಮತ್ತು ಲಿಖಿತ ರಕ್ಷಣಾ ಹೇಳಿಕೆಗಳು ಇವುಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ದಿವಂಗತ ಬಸವರಾಜ ಅಂಗಡಿ, ಕಾರ್ಯದರ್ಶಿ ಇವರು ದಿನಾಂಕ 01.10.2000ರಂದು ನಿಧನ ಹೊಂದಿದ್ದು, ಸದರಿಯವರ ಅವಲಂಬಿತರಿಗೆ ಪಿಂಚಣಿ ಮತ್ತು ಇತರೆ ಸೌಲಭ್ಯಗಳನ್ನು ಮಂಜೂರು ಮಾಡುವ ಮುನ್ನ ಅಂದಿನ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ

ಬಿ.ಟಿ.ಮೋಹನ್ ಇವರು ದಿನಾಂಕ 28.06.2001 ಮತ್ತು 26.08.2001ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬಳ್ಳಾರಿ ಇವರಿಗೆ ಪತ್ರ ಬರೆದು ದಿವಂಗತ ಬಸವರಾಜ ಅಂಗಡಿ ವಿರುದ್ಧ ಯಾವುದಾದರು ಇಲಾಖಾ ವಿಚಾರಣೆ ಬಾಕಿ ಇದೆಯೇ ಅಥವಾ ಸರ್ಕಾರಕ್ಕೆ ಯಾವುದಾದರೂ ಬಾಕಿ ಬರಬೇಕಾಗಿದೆಯೇ ಎಂಬ ಬಗ್ಗೆ ಮಾಹಿತಿ ಒದಗಿಸುವಂತೆ ಕೋರಿದ್ದು, ಸದರಿ ಪತ್ರಕ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಚೇರಿಯಿಂದ ಯಾವುದೇ ಮಾಹಿತಿ ಸ್ವೀಕೃತಿಗೊಂಡಿರುವುದಿಲ್ಲವೆಂದು ಲಿಖಿತ ಹೇಳಿಕೆಯಲ್ಲಿ ಶ್ರೀ ಬಿ.ಟಿ.ಮೋಹನ್ ಇವರು ತಿಳಿಸಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರಿಂದ ದಿವಂಗತ ಬಸವರಾಜ ಅಂಗಡಿ ಇವರಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ, ಬೇಬಾಕಿ ಇರುವ ಬಗ್ಗೆ ಯಾವುದೇ ಮಾಹಿತಿ ಸ್ವೀಕೃತವಾಗದ ಹಿನ್ನೆಲೆಯಲ್ಲಿ, ಒಂದು ವೇಳೆ ದಿವಂಗತರ ಕುಟುಂಬಕ್ಕೆ ಸಕಾಲದಲ್ಲಿ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡದೇ ಇದ್ದಲ್ಲಿ, ಬಡ್ಡಿ ನೀಡಬೇಕಾದ ಸಂದರ್ಭ ಉಂಟಾಗಬಹುದೆಂಬ ಕಾರಣಗಳ ಹಿನ್ನೆಲೆಯಲ್ಲಿ, ಸದರಿಯವರ ಕುಟುಂಬಕ್ಕೆ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ ಅಂದಿನ ಹೂವಿನ ಹಡಗಲಿಯ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ ಬಿ.ಟಿ.ಮೋಹನ್ ಇವರು ದಿನಾಂಕ 22.12.2001ರಲ್ಲಿ ಪ್ರಸ್ತಾವನೆಯನ್ನು ಮಹಾಲೇಖಪಾಲರಿಗೆ ಕಳುಹಿಸಿರುತ್ತಾರೆ.

ತದನಂತರ, ದಿವಂಗತ ಬಸವರಾಜ ಅಂಗಡಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಿ, ಸದರಿಯವರು ಎಸಗಿರುವ ಕರ್ತವ್ಯಲೋಪ ಹಾಗೂ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ರೂ.2,33,630/-ಗಳನ್ನು ಅವರ ಕುಟುಂಬದ ವಾರಸುದಾದರಿಂದ ವಸೂಲಿ ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ದಿನಾಂಕ 19.10.2002ರಂದು ಆದೇಶ ಹೊರಡಿಸಿರುತ್ತಾರೆ.

ಆದರೆ, ದಿವಂಗತ ಬಸವರಾಜ ಅಂಗಡಿ, ಕಾರ್ಯದರ್ಶಿ ಇವರ ವಿರುದ್ಧ ಹಣ ದುರುಪಯೋಗ, ಕರ್ತವ್ಯಲೋಪವೆಸಗಿರುವ ಬಗ್ಗೆ ಇಲಾಖಾ ವಿಚಾರಣೆ ಬಾಕಿಯಿದ್ದರೂ ಸಹ 2000ನೇ ಸಾಲಿನಲ್ಲಿ ಯಾವುದೇ ಮಾಹಿತಿ ನೀಡದೆ, 2002ನೇ ಸಾಲಿನಲ್ಲಿ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟವನ್ನು ಸದರಿಯವರ ವಾರಸುದಾರರಿಂದ ವಸೂಲಿ ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ದಿನಾಂಕ 19.02.2002ರಂದು ಆದೇಶ ಹೊರಡಿಸಿರುತ್ತಾರೆ. ಇದರಿಂದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಕಚೇರಿಯ ಅಧಿಕಾರ/ನೌಕರರು ಮಾಹಿತಿ ನೀಡದೇ ಲೋಪವೆಸಗಿರುವುದು ಕಂಡು ಬರುತ್ತದೆ. 2002ನೇ ಸಾಲಿನಲ್ಲಿ ಆಪಾದಿತ ಅಧಿಕಾರಿ ಶ್ರೀ ಬಿ.ಟಿ.ಮೋಹನ್ ಇವರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹೂವಿನ ಹಡಗಲಿ ಹುದ್ದೆಯ ಕರ್ತವ್ಯದಿಂದ ಬಿಡುಗಡೆ ಹೊಂದಿರುವುದರಿಂದ ಸದರಿಯವರು ಸೇರಿದಂತೆ ಉಳಿದ 12 ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾವಧಿಯಲ್ಲಿ ಆಪಾದಿತ ದಿವಂಗತ ಬಸವರಾಜ ಅಂಗಡಿಯವರ ಅವಲಂಬಿತರಿಗೆ ಯಾವುದೇ ಸೇವಾ ಸವಲತ್ತುಗಳನ್ನು ಬಿಡುಗಡೆಗೊಳಿಸಿರುವುದಿಲ್ಲ. ಈ ಅಂಶಗಳನ್ನು ಪರಿಗಣಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 67 ವಿಸೇಬಿ 2015 ಬೆಂಗಳೂರು ದಿನಾಂಕ:-04.03.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರವು ಈ ಕೆಳಕಂಡ ಹೂವಿನಹಡಗಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕ್ರಮಾಂಕ ಗ್ರಾಅಪ 67 ವಿಸೇಬಿ 2012 ದಿನಾಂಕ

06.04.2015ರ ಕಾರಣ ಕೇಳುವ ನೋಟೀಸಿನ ಜೊತೆ ಜಾರಿ ಮಾಡಿರುವ ದೋಷಾರೋಪಣೆಗಳಿಗೆ ಸಂಬಂಧಿಸಿದಂತೆ, ದೋಷಮುಕ್ತಗೊಳಿಸಿ ಆದೇಶಿಸಿದೆ.

1) ಶ್ರೀ ಬಿ.ಟಿ.ಮೋಹನ್, **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
2) ಶ್ರೀ ವಿ.ಎನ್.ಪಾಟೀಲ್, **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
3) ಡಾ: ಲಾಲ್ಯಾ ನಾಯಕ್, **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
4) ಶ್ರೀ ಐ.ಎಸ್.ಹಿರೇಗೌಡರ, **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
5) ಶ್ರೀ ಸಿ.ಟಿ.ಮುದ್ದುಕುಮಾರ್, **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
6) ಶ್ರೀ ಎಂ.ಶಿವಪ್ಪ, **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
7) ಶ್ರೀ ಬಿ.ಎಸ್.ದೇಸಾಯಿ, **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
8) ಶ್ರೀ ಎಲ್.ಸಿದ್ದೇಶ್ವರ್, **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
9) ಶ್ರೀ ಎಲ್. ಮೇಘನಾಯ್ಕ, **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
10) ಶ್ರೀ ದೇವದಾಸ್ ಟಿ., **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
11) ಶ್ರೀ ಬಿ.ಪಿ. ಹನುಮಂತರೆಡ್ಡಿ, **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
12) ಶ್ರೀ ಯೋಗಾನಂದ ಡಿ.ಬಿ. **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,
13) ಶ್ರೀ ಡಿ.ಮಂಜಣ್ಣ, **ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ**, ಹೂವಿನಹಡಗಲಿ,

ದಿವಂಗತ ಶ್ರೀ ಬಸವರಾಜ ಅಂಗಡಿ, ಹಿಂದಿನ ಕಾರ್ಯದರ್ಶಿ, ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯತಿ, ಹೊಸಪೇಟೆ ತಾಲ್ಲೂಕು ಇವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಮೊತ್ತ ರೂ. 2,33,636/-ಗಳನ್ನು ಆಪಾದಿತ ನೌಕರರ ಕಾನೂನುಬದ್ಧ ವಾರಸುದಾರರಿಂದ ವಸೂಲು ಮಾಡಲು ಸಿವಿಲ್ ದಾವೆ ಹೂಡಲು ಕ್ರಮಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರಿಗೆ ನಿರ್ದೇಶಿಸಿದೆ.

ಹೂವಿನಹಡಗಲಿ ತಾಲ್ಲೂಕು ಪಂಚಾಯಿತಿ ಕಚೇರಿಯ ದಿವಂಗತ ಬಸವರಾಜ ಅಂಗಡಿ, (ಈ ಹಿಂದೆ ಕಾರ್ಯದರ್ಶಿ, ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯತಿ, ಹೊಸಪೇಟೆ ತಾಲ್ಲೂಕು) ನಾಗ್ತಿಬಸಾಪುರ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಇವರ ವಿರುದ್ಧದ ಇಲಾಖಾ ವಿಚಾರಣೆ ಮಾಹಿತಿ ಹಾಗೂ ಸರ್ಕಾರಕ್ಕೆ ಬರಬೇಕಾದ ಬಾಕಿ ಕುರಿತು, ನಿಗಧಿತ ಅವಧಿಯಲ್ಲಿ ಕ್ರಮ ಕೈಗೊಳ್ಳದೆ ಹಾಗೂ ಸದರಿ ಕ್ರಮದ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹೂವಿನಹಡಗಲಿ ಇವರಿಗೆ ತಿಳಿಸದೆ ಇರುವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಕಛೇರಿಯ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

4/3/16

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1) ಮಹಾಲೇಖಪಾಲರು, (ಎ&ಇ) ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ.

3) ಸಂಬಂಧಿಸಿದ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಇವರ ಮುಖಾಂತರ).

**ಪ್ರತಿಯನ್ನು ಮಾಹಿತಿಗಾಗಿ:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.